ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 98-101
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣರ ಕಾಯಕ ಸಿದ್ಧಾಂತ ಮತ್ತು ಆರ್ಥಿಕ ಅಭಿವೃದ್ಧಿ

**ಡಾ. ಬಿ.ಎಸ್. ಗಂಗನಳ್ಳಿ**

ಮುಖ್ಯಸ್ಥರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬೆಳಗಾವಿ.

**Abstract:**

*ಶ್ರೇಣಿಕೃತವಾದ ಜಾತಿ ವ್ಯವಸ್ಥೆಯು ಅತ್ಯಂತ ಕಟ್ಟುನಿಟ್ಟಾಗಿ ಪಾಲನೆಯಲ್ಲಿದ್ದ 12ನೇ ಶತಮಾನದಲ್ಲಿ ಶರಣರು ಸಮಾನತೆ–ಸಹಬಾಳ್ವೆಯ ಮಂತ್ರವನ್ನು ಘೋಷಿಸಿದರು. ಈ ಘೋಷಣೆ ಉಪದೇಶಾತ್ಮಕವಾಗಿರದೆ ಸ್ವತಃ ಕಾರ್ಯಗತ ಮಾಡಿಕೊಂಡಿದ್ದರು. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಧ್ಯೇಯವನ್ನಿಟ್ಟುಕೊಂಡು ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾದರು. ಆದರೂ ಬಸವಣ್ಣನವರು ಕಾಯಕ, ದಾಸೋಹ, ಏಕದೇವೋಪಾಸನೆ, ಅಂತರ್ಜಾತಿ ವಿವಾಹ ಹೀಗೆ ತಾವು ಹಾಕಿಕೊಂಡ ಯೋಜನೆಗಳನ್ನು ಕೈಬಿಡದೆ ಅನುಷ್ಠಾನಗೊಳಿಸಿದರು. ಇಂದಿನ ಆಧುನಿಕ ಕಾಲದಲ್ಲಿಯೂ ಕೂಡ ಸಮಕಾಲೀನ ಸಮಾಜಕ್ಕೆ ಸವಾಲಿನ ಕೆಲಸವಾಗಿದೆ. ಇಂಥ ಕಾರ್ಯವನ್ನು ಶರಣರು ಅಂದೇ ಮಾಡಿದರು. ಪ್ರಸ್ತುತ ಲೇಖನದಲ್ಲಿ ಶರಣರ ಕಾಯಕತತ್ವವನ್ನು ವಿಶ್ಲೇಷಣೆ ಮಾಡಲಾಗಿದೆ.*

**Keywords:** *ಶಿವಶರಣರು, ವಚನಗಳು, ವಚನ ಸಾಹಿತ್ಯ, ಕಾಯಕ ತತ್ವ, ಆರ್ಥಿಕ ಅಭಿವೃದ್ಧಿ.*

**ಪೀಠಿಕೆ**

ಬಹುಸಂಸ್ಕೃತಿ, ಬಹುಭಾಷೆ, ಬಹುಪಕ್ಷ, ಬಹುಧರ್ಮಗಳ ಹಾಗೂ ಬಹುಜನಸಂಖ್ಯೆ ಹೊಂದಿದ ವೈವಿಧ್ಯಮಯವಾದ ಭಾರತದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಬಲಪಡಿಸುವುದು ಹರಸಹಾಸವೇ ಸರಿ. ಆದರೆ ಬಸವಣ್ಣನವರು ಕಾಯಕ ಸಿದ್ಧಾಂತದ ಮೂಲಕ ಕಾರ್ಯರೂಪಕ್ಕೆ ತಂದು ಯಶಸ್ವಿಯಾದರು. ಅರಮನೆಯ ಭೋಗ ಜೀವನಕ್ಕೆ ಅಭಿಮುಖವಾಗಿ 'ಮಹಾಮನೆ'ಯೆಂಬ ಶ್ರಮಜೀವಿಗಳ ದುಡಿಮೆಯ ಕಾಯಕ ಜೀವನದ ಮಹಾಸೌಧವನ್ನು ಕಟ್ಟಿ ಬೆಳೆಸಿ ನಿಲ್ಲಿಸಿದರು. ಶರಣರ ಕಾಯಕ ಸಿದ್ಧಾಂತ ಅಭಿವೃದ್ಧಿಯ ಕನಸನ್ನು ಇಟ್ಟುಕೊಂಡು ಹುಟ್ಟಿರುವ ಒಂದು ಅಭಿವೃದ್ಧಿ ಪ್ರಣಾಳಿಕೆಯಾಗಿದೆ "ಕಾಯಕ"ದ ಅರ್ಥವನ್ನು ವಿಶ್ಲೇಷಿಸಿದಾಗ 'ಕಾಯ' ಎಂದರೆ ಶರೀರ ಕಾಯವನ್ನು ದುಡಿಸಿ ಮಾಡುವ ಕೆಲಸವಾಗಿದೆ.

ವಚನ ಸಂಸ್ಕೃತಿಯಲ್ಲಿ ಬದುಕೇ ದುಡಿಮೆ, ದುಡಿಮೇಯೇ ಬದುಕು. ಇವೆರಡನ್ನು ಶರಣರು ಭಿನ್ನವಾಗಿ ಕಾಣಲಿಲ್ಲ. ಶರಣರ ಈ ಕಾಯಕ ಸಿದ್ಧಾಂತ ಜಾಗತಿಕ ಆಯಾಮವುಳ್ಳ ಒಂದು ಅದ್ಭುತ ಮಹತ್ವದ ಹೊಸ ಸಿದ್ಧಾಂತವಾಗಿದೆ. ತಲೆತಲಾಂತರದಿಂದ ಮಾಡಿಕೊಂಡು ಬಂದಿರುವ ವೃತ್ತಿ ಕಸಬುಗಳೇ ಸಮಾಜದಲ್ಲಿ ಕುಲಗಳನ್ನು ಸೃಷ್ಟಿಸಿ, ಕುಲಬೇಧ ಹುಟ್ಟಿಸಿ ಕೋಲಾಹಲ ಎಬ್ಬಿಸಿದ್ದವು. ಕುಲಭೇದ ಹೆಮ್ಮರವಾಗಿ ಬೆಳೆದು ಆಳವಾಗಿ ಬೇರು ಬಿಟ್ಟು ಅಭೇದ್ಯವಾಗಿತ್ತು. ಬಸವಣ್ಣನವರು ಕುಲಭೇದವನ್ನು ಬೇರು ಸಹಿತ ಕಿತ್ತು

**Please cite this article as:** ಗಂಗನಳ್ಳಿ, ಬಿ.ಎಸ್ (2023). ಶರಣರ ಕಾಯಕ ಸಿದ್ಧಾಂತ ಮತ್ತು ಆರ್ಥಿಕ ಅಭಿವೃದ್ಧಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 98–101.

ಹಾಕಲು ಕಾಯಕದ ಮೂಲಕ ಮಾತ್ರ ಸಾಧ್ಯವೆಂದು ಮನಗಂಡು ಕಾಯಕ ಸಿದ್ಧಾಂತವನ್ನು ಅನುಷ್ಠಾನಗೊಳಿಸಿದರು, ಸಂಪ್ರದಾಯ, ಕಟ್ಟಳೆಗಳನ್ನು ಮುರಿದು ಚಾತುರ್ವರ್ಣ ಪದ್ಧತಿಯ ವ್ಯವಸ್ಥೆಯನ್ನು ಸಂಪೂರ್ಣ ಅಳಿಸಿ ಹೊಸ ಮನ್ವಂತರ ಸೃಷ್ಟಿಸಿದರು. ಕಾಯಕದಲ್ಲಿ ಮೇಲಿಲ್ಲ–ಕೀಳಿಲ್ಲ "ಆವ ಕಾಯಕ ಮಾಡಿದೊಡೆ ಒಂದೇ ಕಾಯಕ" ಎಂದು ಗಂಗಮ್ಮ ಹೇಳಿದಂತೆ ಕಾಯಕದಲ್ಲಿ ಮೇಲು–ಕೀಳಿಲ್ಲ ಎಂದು ಶರಣೆ ಕಾಳವ್ವೆ ಕಾಯಕದ ಮಹತ್ವವನ್ನು ಸಾರಿದರು.

ಬಸವಣ್ಣನ ದೃಷ್ಟಿಯಲ್ಲಿ ಕಾಯಕವೆಂಬುದು ಪ್ರತಿಯೊಬ್ಬನ ಬದುಕಿನ ಧರ್ಮವಾಗ ಬೇಕು. ದುಡಿದು ಗಳಿಸದ ಹೊರತು ಉಣ್ಣುವ ಹಕ್ಕಿಲ್ಲವೆಂಬುದು ಅವರ ನಿಲುವು. "ಕಾಯಕವೇ ಕೈಲಾಸ" ಇದು ಸತ್ಯ ಎಂದಿದ್ದಾರವರು. ಕಾಯಕ ಪ್ರತಿಯೊಬ್ಬನ ಅವಶ್ಯಕತೆ. ಅದರಲ್ಲಿ ಮೇಲು–ಕೀಳುಗಳಿಲ್ಲ. ಅದು ವ್ಯಕ್ತಿತ್ವವನ್ನು ನಿರ್ಧರಿಸುವುದಿಲ್ಲ. ಆದರೆ ಕಾಯಕದಲ್ಲಿರುವ ನಿಷ್ಠೆ ವ್ಯಕ್ತಿತ್ವದ ನಿರ್ಧಾರಕ. ನಿಷ್ಠೆ ಸರಿಯಾಗಿದ್ದರೆ ಮಾತ್ರ ಕಾಯಕವೇ ಕೈಲಾಸ. ಹೀಗೆ ಬಸವಣ್ಣನವರ ದೃಷ್ಟಿಯಲ್ಲಿ ಜೀವನ್ಮುಕ್ತಿಗೆ ಕಾಯಕವೇ ತಪಸ್ಸು. ಆದರೆ ದುಡಿಮೆ 'ಕಾಯಕ' ವಾಗುವುದು ಫಲವನ್ನು ಹಂಚಿ ತಿಂದಾಗ ಮಾತ್ರ. ಇದಕ್ಕೆ ಪೂರಕವಾಗಿ ನುಲಿಯ ಚಂದಯ್ಯ ಹೀಗೆ ಹೇಳಿದ್ದಾನೆ –

***ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ,***

***ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು,***

***ಜಂಗಮವಾದರೂ ಕಾಯಕದಿಂದಲೇ ವೇಷದ ಪಾಶ ಹರಿವುದು.***

ಯಾವುದೇ ಕೆಲಸ ಕೀಳಲ್ಲ, ಯಾವುದೂ ಮೇಲಲ್ಲ ಎಂಬ ಸಮದೃಷ್ಟಿಯನ್ನು ಬೆಳೆಸಿಕೊಳ್ಳ ಬೇಕೆಂಬುದು ಬಸವಣ್ಣನವರ ಚಿಂತನೆಯಾಗಿತ್ತು.

***"ಕೃಷಿ ಕೃತ್ಯ ಕಾಯಕದಿಂದಾದಡೇನು? ತನು ಮನ ಬಳಲಿಸಿ ತಂದು***

***ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದ ತೋರಯ್ಯ,***

***ಆತನ ತನುಶುದ್ಧ, ಮನಶುದ್ಧ, ನಡೆ ಶುದ್ಧ, ನುಡಿಯೆಲ್ಲ ಪಾವನವು".***

ಮನುಷ್ಯನ ನಡೆ–ನುಡಿಗಳು ಶುದ್ಧವಾಗಿರಬೇಕು, ತನುಮನಗಳು ಪಾವನವಾಗಿರ ಬೇಕೆಂಬುದು ಅವರ ಆಶಯವಾಗಿತ್ತು. *"ವೇದವನೋದುವ ಹಾರುವ ತೊಗಲು ಹದ ಮಾಡುವ ಡೋಹರನಿಗಿಂತ ಮೇಲಲ್ಲ"* ಎಂದಿದ್ದಾರೆ. ಹೀಗೆ ಎಲ್ಲ ಕೆಲಸಗಳ ಘನತೆಯನ್ನು ಸಮಾನ ನೆಲೆಗೆ ತಂದು ನಿಲ್ಲಿಸಿದ ಕಾಯಕ ತತ್ವವು ಸಮಾಜದಲ್ಲಿ ವೃತ್ತಿ ಚಲನೆಗೆ ಕಾರಣವಾಗಿ ಸ್ಥಗಿತತೆಯನ್ನು ಅಲ್ಲಾಡಿಸಿತೆನ್ನಬಹುದು.

ಶ್ರಮಜೀವಗಳಾದ ಕೆಳವರ್ಗದ ಜನತೆ ಕಷ್ಟಪಟ್ಟು ದುಡಿದಿದ್ದನ್ನು ರಾಜಬೊಕ್ಕಸ ಸೇರಿ ಮಂತ್ರಿ, ಅಧಿಕಾರಿಗಳು, ಪುರೋಹಿತ ವರ್ಗದವರ ಪಾಲಾಗುತ್ತಿತ್ತು. ಶೂದ್ರರು ಪಾಮರರು ದುಡಿದು ದುಡಿದು, ಸಣ್ಣಾಗಿ, ಮಣ್ಣಾಗಿ ರೋಗಕ್ಕೆ ತುತ್ತಾದರೂ ಶತಮಾನಗಳಿಂದಲೂ ತುಳಿತಕೊಳ್ಳಗಾದ ಜನರ ರೋಗ–ರುಜಿನಗಳ ಮೇಲೆ ಆಗುತ್ತಿರುವ ದೌರ್ಜನ್ಯ ಗಳು ಪ್ರಭುತ್ವದವರಿಂದಲೇ ಆಗುತ್ತಿದ್ದವು. ಆದರೂ ಈ ಜನ ಸತ್ತು ಬದುಕಿದರೂ ಬಡವರ ಬದುಕಿನ ಬವಣೆಯನ್ನು ಕೇಳುವವರು, ತಿರುಗಿ ನೋಡುವವರು ಇರಲಿಲ್ಲ. ಬದುಕಿದ್ದರೂ ಅಲಕ್ಷಕ್ಕೆ ಒಳಗಾಗಿದ್ದರು. ಅಲಕ್ಷಿತ ಸಮುದಾಯದವರು ನಿರ್ಗತಿಕರ, ದೀನ ದುರ್ಬಲರ ಪರವಾಗಿ ಬಸವಣ್ಣನವರು ಬೆದರದೆ, ಬೆಚ್ಚದೆ ಕಾರ್ಯೋನ್ಮುಖಗೊಂಡರು.

***ಆರುಮುನಿದು ನಮ್ಮನೇನು ಮಾಡುವರು?***

***ಊರುಮುನಿದು ನಮ್ಮನೆಂತು ಮಾಡುವದು?***

ಸ್ವಾಭಿಮಾನದ ಸಂಕೇತವಾಗಿ ಮೂಡಿಬಂದ ಈ ಮಾತು ಪರಿಶುದ್ಧ ಮಾತಾಗಿದೆ. ಭ್ರಷ್ಟಾಚಾರರಹಿತವಾದ ಸತ್ಯ ಶುದ್ಧ ಕಾಯಕದ ಮೂಲಕ ಶ್ರಮಪಟ್ಟು ದುಡಿದು ಸಂಪಾದನೆ ಮಾಡಿ, ಅಂದಂದಿನಕ್ಕೆಷ್ಟುಬೇಕೋ ಅಷ್ಟನ್ನು ಇಟ್ಟುಕೊಂಡು ಉಳಿದದ್ದನ್ನು ದಾಸೋಹಕ್ಕೆ

(ಸಮಾಜಕ್ಕೆ) ವಿನಿಯೋಗಿಸುವ ಈ ತತ್ವವು ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ವೈಚಾರಿಕತೆಯಿಂದ ಕೂಡಿದ ಹೊಸ ಆರ್ಥಿಕ ನೀತಿಯಾಗಿದೆ.

ಜಾತಿ–ಮತ ಕುಲ–ನೆಲ ಹೆಣ್ಣು–ಗಂಡು ಬಡವ–ಬಲ್ಲಿದ ಇತ್ಯಾದಿ ಪವಿತ್ರ–ಅಪವಿತ್ರ ಎಂಬ ಭಿನ್ನತೆ ಗಳಿರಲಿಲ್ಲ.

***"ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ"***

ಎಂದು ಹೇಳಿರುವಲ್ಲಿ ಜಾತಿ–ಭೇದ ನಿಷೇಧತೆ ಯನ್ನು ಹಾಗೂ ಸಮಾಜದಲ್ಲಿ ಸಮಾನತೆಯ ಕುರಿತು ಚಿಂತಿಸಿದರು. ಬಂಧನ ಅಲಕ್ಷಕ್ಕೆ ಒಳಗಾದ ಸ್ತ್ರೀಯರಿಗೂ ಮುಕ್ತ ಸಾತಂತ್ರ್ಯವನ್ನು ಒದಗಿಸಿಕೊಟ್ಟಿರುವ ಈ ಹಿನ್ನಲೆಯಲ್ಲಿ ಕಾಯಕ ಸಿದ್ಧಾಂತಕ್ಕೆ ಮಹಿಳೆಯರ ಕೊಡುಗೆ ಅದ್ಭುತವಾದುದು. ಸ್ತ್ರೀಯರ ಪಾತ್ರ ಇಲ್ಲಿ ಬಹಳ ಮುಖ್ಯವಾಗಿದೆ.

ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ, ಜೇಡರ ದುಗ್ಗಳೆ ಸತ್ಯಕ್ಕ, ಅಕ್ಕಮ್ಮ, ಮಹಾದೇವಿಯಕ್ಕ ಮುಂತಾದವರು ಕಾಯಕವನ್ನು ಮನಮೆಚ್ಚಿ ಮಾಡಿದರು. ಕಾಯಕವನ್ನು ಪ್ರಾಣಕ್ಕೆ ಸಮನಾಗಿ ಕಂಡರು. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯ ಶರಣರು ಅನುಭವ ಮಂಟಪದಲ್ಲಿ ಕಾಯಕವನ್ನು ಮರೆತು ವಾದ ಸಂವಾದದಲ್ಲಿ ಮುಳುಗಿದ್ದಾಗ "ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ, ತಿಪ್ಪೆಯ ತಪ್ಪಲ ಅಕ್ಕಿಯ ತಂದು ಕಾಯಕ ಮಾಡಬೇಕು ಎಂದು ಎಚ್ಚರಿಸುತ್ತಾಳೆ. ವ್ಯರ್ಥ ಕಾಲಹರಣ ಮಾಡದೆ ಕಾಯಕದಲ್ಲಿ ತೊಡಗುವುದು ಲೇಸು ಎನ್ನುವ ಸಂದೇಶವೂ ಇಲ್ಲಿ ಎದ್ದುಕಾಣುತ್ತದೆ. ಅಲ್ಲದೆ ಎಲ್ಲಕ್ಕಿಂತಲೂ ಹೆಚ್ಚು ಕಾಯಕ ದುಡಿಮೆ, ಶರಣರಿಗೆ ದುಡಿಮಯೇ ದೇವರು ಕಾಯಕವೇ ಕೈಲಾಸವಾಗಿತ್ತು.

ಕಾಯಕ ಮತ್ತು ಉತ್ಪಾದನೆಗೆ ಸಂಬಂಧಿಸಿದಂತೆ, ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮೀ ತಾನಾಗಿಪ್ಪಳು' ಎನ್ನುವಳು. ಶರಣೆ ಲಕ್ಕಮ್ಮ ಬಡವ–ಬಲ್ಲಿದ, ಮೇಲು–ಕೀಳು, ಗಂಡು–ಹೆಣ್ಣು ಎನ್ನದೇ ಎಲ್ಲರೂ ಕಾಯಕದಲ್ಲಿ ಪರಿಶುದ್ಧ ಮನಸ್ಸಿನಿಂದ ತೊಡಗಿಸಿಕೊಂಡರೆ, ಅಂತಹ ಸಮಾಜ ತನ್ನಿಂದ ತಾನೆ ಸಮೃದ್ಧಿಯನ್ನು ಹೊಂದಿ ಅಭಿವೃದ್ಧಿಯೆಡೆಗೆ ಸಾಗುತ್ತದೆ.

ಶರಣರ ಕಾಯಕ ದಾಸೋಹ ತತ್ವಗಳನ್ನು ಇಂದಿನ ಅರ್ಥಶಾಸ್ತ್ರದ ಉತ್ಪಾದನೆ ಮತ್ತು ವಿತರಣೆಗಳಿಗೆ ಸಂವಾದಿಯಾಗಿ ಬಳಸಬಹುದಾಗಿದೆ. 12ನೇ ಶತಮಾನದ ಕಾಲಘಟ್ಟದಲ್ಲಿನ ವಚನ ಸಾಹಿತ್ಯದ ಪಾತ್ರ ಜಗತ್ತಿನಲ್ಲಿಯೇ ವಿಶೇಷವಾದುದಾಗಿದೆ. ಕಾಯಕ ಮತ್ತು ದಾಸೋಹ ಇವೆರಡೂ ಏಕಕಾಲದಲ್ಲಿ ನಡೆಯಬೇಕಾದ ಪ್ರಕ್ರಿಯೆ *'ದುಡಿಯುವವನೇ ಮೇಲು' 'ದುಡಿಯುವವನ ಕಾಲು ಸದ್ಗುರುವಿಗಿಂತ ಮಿಗಿಲು'* ಎಂಬ ಮಾತು ದುಡಿಯುವ ವರ್ಗದವರ ಮೇಲಾಗುತ್ತಿರುವ ದೌರ್ಜನ್ಯ, ಹಿಂಸೆಗಳು, ದುಡಿಯದ ಮೇಲ್ವರ್ಗದವರ ಅಟ್ಟಹಾಸ ನಿಲ್ಲಸಲು ಆ ಕಾಲದಲ್ಲಿ ಜನಸಾಮಾನ್ಯರಲ್ಲಿ ಒಂದು ಸಂಚಲನವನ್ನೇ ಮೂಡಿಸಿತ್ತು. ದುಡಿಯುವ ವರಿಗೆ ಮಾತ್ರ ಉತ್ಪನ್ನದಲ್ಲಿ ಪಾಲು ಎಂಬುದು ಶರಣರ ಕಟ್ಟುನಿಟ್ಟಿನ ಮಾತಾಗಿತ್ತು. ಆದರೆ ಉಳುವವನೇ ಭೂ ಒಡೆಯ "ಅನ್ನುವ ವಿಚಾರ ಜಾರಿಗೆ ಬರುವವರೆಗೆ ದುಡಿಯುವವರಿಗೆ ತುಂಡು ಭೂಮಿಯು ಇರಲಿಲ್ಲ. ಇಂದಿನ ಅಧುನಿಕ ಯುಗದಲ್ಲಿ 'ಉತ್ಪಾದನೆ ಮೊದಲು ವಿತರಣೆ ನಂತರ' ಎನ್ನುವು ದನ್ನು ಪಾಲಿಸಲಾಗುತ್ತದೆ. ಬಂಡವಾಳ ಉತ್ಪಾದನೆ ವರಮಾನ ಇವುಗಳೇ ಅಭಿವೃದ್ಧಿಯಾಗಿಬಿಟ್ಟಿದೆ.

ಸಾಹಿತ್ಯ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳು ಸಮಾಜದಲ್ಲಿ ನಡೆಯುವ ಆಗುಹೋಗುಗಳು ಸಾಹಿತ್ಯದಲ್ಲಿ ಪ್ರತಿಬಿಂಬಿತ ವಾಗುತ್ತವೆ. ಆಯಾ ಕಾಲಕ್ಕೆ ತಕ್ಕ ಮೌಲ್ಯಗಳು ಸಾಹಿತ್ಯ ಕೃತಿಗಳಲ್ಲಿ ಮೂಡಿ ಬಂದಿರುತ್ತವೆ. ಉದಾಃ 10ನೇ ಶತಮಾನವನ್ನು ಕ್ಷಾತ್ರಯುಗ, ಚಂಪೂಯುಗ ಎಂದು ಕರೆಯಲಾಗುತ್ತದೆ. ಮೇಲಿಂದ ಮೇಲೆ ಯುದ್ಧಗಳು ನಡೆಯುತ್ತಿರುವ ಕಾಲಘಟ್ಟವದು, ಪಂಪಾದಿಗಳು ಪ್ರತಿಪಾದಿಸಿದ ವೀರ–ದಾನ–ತ್ಯಾಗ ಮೌಲ್ಯಗಳು ಆ ಕಾಲದ ಕೃತಿಗಳಲ್ಲಿ ಬಿತ್ತರಿಸಲಾಗಿದೆ.

ಅದೇ ರೀತಿ 12ನೇ ಶತಮಾನಕ್ಕೆ ಬಂದಾಗ ಕ್ರಾಂತಿಯುಗ, ವಚನಯುಗ ವೆಂದು ಕರೆಯುವರು. ಸಾಹಿತ್ಯಕವಾಗಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಹಲವಾರು ಕ್ರಾಂತಿಕಾರಿಕ ಬೆಳವಣಿಗೆಗಳು ನಡೆದವು. ಜಾತಿಬೇಧ ಲಿಂಗಭೇದ ವರ್ಗಭೇದ ಮೂಢನಂಬಿಕೆಗಳ ನಿಷೇಧ ಇತ್ಯಾದಿ ಅನಿಷ್ಠ ಪದ್ಧತಿಗಳ ವಿರುದ್ಧ ಭಿನ್ನವಾದ ಆಲೋಚನೆಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ಸರಳವಾದ ವಚನಗಳ ರಚನೆಯ ಮೂಲಕ ವ್ಯಷ್ಟಿ ಮತ್ತು ಸಮಷ್ಟಿ ಸುಧಾರಣೆಯ ಧ್ಯೇಯವನ್ನು ಇಟ್ಟುಕೊಂಡು ಬಸವಣ್ಣನವರ ನೇತೃತ್ವದಲ್ಲಿ ಹಲವಾರು ಅಭಿವೃದ್ಧಿಪರ ಚಿಂತನೆಗಳನ್ನು ಕಾರ್ಯಗತಗೊಳಿಸಲಾಯಿತು. ಬಸವಣ್ಣನವರ ಯೋಜನೆಗಳಲ್ಲಿ ಕಾಯಕ ಮತ್ತು ದಾಸೋಹ ತತ್ವಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ.

ಕಾಯಕದ ಉದ್ದೇಶ ದಾಸೋಹ, ಹಂಚಿ ತಿನ್ನುವುದು ಹಾಗೂ ಎಲ್ಲರಿಗೂ ಅನ್ವಯವಾಗುವ ದುಡಿಮೆಯ ಸಂಗತಿ. ದುಡಿಮೆಯನ್ನೇ ದೇವರು, ಕಾಯಕವೇ ಕೈಲಾಸವೆಂದರು. ಶರಣರ ಈ ಕಾಯಕದ ಕಲ್ಪನೆ ಅತ್ಯಾಧುನಿಕ ಆರ್ಥಿಕ ನೀತಿಯಾಗಿದೆ. ಶರಣರು ಕಾಯಕವು ದೇವರಿಗಿಂತ ಮಿಗಿಲು, ದುಡಿಮೆಯನ್ನು ನೆಚ್ಚಿಕೊಂಡು ಬದುಕಿದವರು, ಮೋಳಿಗೆ ಮಾರಯ್ಯನವರು ಗುರು–ಲಿಂಗ–ಜಂಗಮಕ್ಕಿಂತ ಕಾಯಕ ಶ್ರೇಷ್ಠವೆಂದರು. ನುಲಿಯ ಚಂದಯ್ಯನವರು ಗುರು–ಲಿಂಗ–ಜಂಗಮಗಳಿಗೂ ಕಾಯಕದಿಂದ ವಿನಾಯಿತಿಯಿಲ್ಲ. ಅವರೂ ಕಾಯಕದ ಹೊರತಲ್ಲ ಎನ್ನುತ್ತಾರೆ.

ಶರಣರ ಈ ಕಾಯಕದ ಪರಿಕಲ್ಪನೆ ಅತ್ಯಂತ ವೈಚಾರಿಕತೆಯಿಂದ ಕೂಡಿದೆ. ಕಾಯಕವೆನ್ನುವುದು ದೇವಾಲಯ ಮುಕ್ತ, ದಾಸೋಹ ಪ್ರಣೀತ, ವ್ಯಕ್ತಿಕೇಂದ್ರಿತ ಪ್ರಣಾಳಿಕೆ. ಇಲ್ಲಿ ಪ್ರತಿಯೊಬ್ಬರು ದುಡಿಯಲೇಬೇಕು. ದುಡಿಮೆಯ ಒಂದು ಭಾಗವನ್ನು ಸಮಾಜದ ಜೊತೆಗೆ ಹಂಚಿಕೊಳ್ಳಬೇಕು. ದಾನ ಮಾಡುವುದು ದೀನ ದುರ್ಬಲರಿಗೂ ನೆರವು ನೀಡುವುದು.

**ಸಾರಾಂಶ:**

ಒಟ್ಟಾರೆ ಕಾಯಕವು ದೈವದತ್ತವಾಗಿ ಬಂದುದಲ್ಲ, ಅದೊಂದು ಸಾಮಾಜಿಕ ವ್ಯವಸ್ಥೆ ಕಾಯಕದ ಫಲವೇ ಉತ್ಪಾದನೆ. ಈ ಹಿನ್ನಲೆಯಲ್ಲಿ ಕಾಯಕ ಮೀಮಾಂಸೆಯನ್ನು ಅಭಿವೃದ್ಧಿ ಪ್ರಣಾಳಿಕೆ ಕರೆಯಲಾಗಿದೆ". ಕಾಯಕಕ್ಕೆ ಸಮಕಾಲೀನ ಸಮಸ್ಯೆಗಳನ್ನು ಅರ್ಥ ಮಾಡಿಸುವ ಗುಣವಿದೆ. ಈ ಕಾಲಕ್ಕೂ ಇನ್ನೂ ಉಳಿದುಕೊಂಡು ಬಂದಿರುವ ಸಾಮಾಜಿಕ ಸಮಸ್ಯೆಗಳ ಕುರಿತು ಗಂಭೀರವಾದ ಚರ್ಚೆಗಳನ್ನು 12ನೇ ಶತಮಾನದಲ್ಲಿಯೇ ಮಾಡಿದ್ದಾರೆ. ಆ ಕಾರಣಕ್ಕಾಗಿಯೇ 12ನೇ ಶತಮಾನದ ಕಾಯಕ ಸಿದ್ಧಾಂತವು ನಮಗೆ ಇಂದಿನ ಪ್ರಸ್ತುತ 21ನೇ ಶತಮಾನದಲ್ಲಿಯೂ ಹಾಗೂ ಮುಂಬರುವ ಎಲ್ಲ ಕಾಲಕ್ಕೂ ಅರ್ಥಪೂರ್ಣವೆನಿಸಿ ಉಪಯುಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**


- ಮಹಾದೇವಪ್ಪ, ಎನ್. ಜಿ. (2021). *ವಚನ ಪರಿಭಾಷಾ ಕೋಶ–ಸಂ. 15.* ಕನ್ನಡ ಪುಸ್ತಕ ಪ್ರಾಧಿಕಾರ.
- ಮಹೇಶ ತಿಪ್ಪಶೆಟ್ಟಿ. (2009). *ಬಸವತತ್ವ: ಸಾಮಾಜಿಕ ಬದಲಾವಣೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- *ಸಮಗ್ರ ವಚನ ಸಂಪುಟ.* (2001). ಕನ್ನಡ ಪುಸ್ತಕ ಪ್ರಾಧಿಕಾರ.
- ತಿಪ್ಪೇರುದ್ರಸ್ವಾಮಿ ಎಚ್. (2019). *ಶರಣರ ಅನುಭಾವ ಸಿದ್ಧಾಂತ.* ಡಿ.ವಿ.ಕೆ. ಮೂರ್ತಿ.
- ವೀರಣ್ಣ ರಾಜೂರ. (ಸಂ.) (2001). *ಶಿವಶರಣೆಯರ ವಚನ ಸಂಪುಟ.* ಕನ್ನಡ ಪುಸ್ತಕ ಪ್ರಾಧಿಕಾರ.